ಅಷ್ಟು ಸುಲಭದಲ್ಲಿ ಬರುವುದಿಲ್ಲ. ಕೆಲವರು ಬರೀ ಹೇನನ್ನು ಹುಡುಕಿ ಹೊರ ತೆಗೆಯುತ್ತಾರೆ. ಊರ ಸಮಸ್ತರ ದೃಷ್ಟಿಯಲ್ಲಿ ತಲೆಯಲ್ಲೇ ಕುಕ್ಕಿ ಹೇನು ಕೊಲ್ಲುವವರು ನಿಷ್ಣಾತರು. ತೆಗೆದು ಕೊಲ್ಲುವವರು ಪುಸ್ಕ. ಹೇನು ಹುಡುಕುವಾಗ ಒಂದು ಕೂದಲು ಅಡ್ಡ ಬಂದರೆ ಒಂದು ಗುಡ್ಡ ಅಡ್ಡ ಬಂದ ಹಾಗೆ ಎಂದು ಹೇಳುತ್ತಾ ಆ ಗುಡ್ಡಗಾಡಿನಲ್ಲಿ ತಪ್ಪಿಸಿಕೊಳ್ಳುವ ಹೇನುಗಳನ್ನು ತಾವು ಎದ್ದು ಬಿದ್ದು ಹರ ಸಾಹಸದಿಂದ ಹುಡುಕಿ ಅಲ್ಲೇ ಕೊಂದು ಹೇನು ವಿಮೋಚನಾ ಚಳವಳಿ ಆರಂಭಿಸಿದ ರೀತಿಯಲ್ಲಿ ಬಿಲ್ಡ್ ಅಪ್ ಬೇರೆ ಕೊಡುತ್ತಾರೆ. ಹುಡುಕುತ್ತಾ ನೋಡುತ್ತಾ ಅವರಿಗೆ ಒಂಥರಾ ಸ್ಪೋರ್ಟ್ಸ್ ಮ್ಯಾನ್ ಸ್ಪಿರಿಟ್ ಬಂದು ಬಿಡ್ತದೆ. ನೋಡುವುದೇ ಚಟವಾಗಿ ಬಿಡುತ್ತೆ. ಅವರು 'ತಲೆ ಕಾಂತೆ ಬಾ' ಎಂದರೆ ಉಭಯ ಸಂಕಟ. 'ಬಂದ್ರೆ ನನ್ನ ತಿಂದ್ ಹಾಂಗೆ ಬಾರದಿದ್ರೆ ನನ್ ಕೊಂದ್ ಹಾಂಗೆ' ಅನ್ನೋ ರೀತಿ. ಹೋದ್ರೆ ಆ ನೋವು. ಹೋಗದಿದ್ರೆ 'ಮರ್ಯಾದೆ ಸತ್ತವ್ಪ್, ಮಂಡಿಂಗೆ ಆ ಪರಿ ಹೇನಿದ್ದೋ ಕಾಂತೆ ಅಂದ್ರೆ ಬತ್ತಿಲ್ಲೆ' ಅಂತ ಇದ್ದ ಮೂರು ಕಾಸಿನ ಮರ್ಯಾದೆಯನ್ನು ಎಲ್ಲರ ಎದುರಿಗೆ ತೆಗೆಯುವ ಭಯ. ಆ ಉಗುರಿನ ಕುಕ್ಕುವ ನೋವಿನಿಂದ ತಪ್ಪಿಸಿಕೊಳ್ಳಲು ನಾನು ಹರಸಾಹಸ ಪಡುತ್ತಿದ್ದೆ.

ಅದೊಂದು ಸಣ್ಣ ಕಪ್ಪು ಹಾಗು ಕಂದು ಮಿಶ್ರಿತ ಬಣ್ಣದ ಬಾಚಣಿಕೆ. ಅಂಗೈ ಅಗಲದ್ದು. ಒತ್ತಿ ಬಾಚಿಕೊಂಡರೆ ಹೇನುಗಳು ಬರುವ ಬಾಚಣಿಕೆ. ಅದೊಂದು ರೀತಿ ಹೆಣ್ಣು ಮಕ್ಕಳ ಪಾಲಿನ ಆಪತ್ಬಾಂಧವ. ಅದರಲ್ಲಿ ಒತ್ತಿ ಬಾಚಿ ಅಮ್ಮ ಹೇನು ತೆಗೆದರೆ ನಮ್ಮದು ಎಷ್ಟು ಹೇನು ಬಂದಿದೆ ಎಂದು ಲೆಕ್ಕ ಹಾಕುವ ಕೆಲ್ಸ. ಸಣ್ಣ ಮರಿಯಿಂದ ಹಿಡಿದು ದೊಡ್ಡ ಟೊಣಪ ಹೇನುಗಳನ್ನು ಹುಡುಕಿ ಸದೆ ಮುರಿ ಬಡೆದು ನಮ್ಮ ಮುಂದೆ ಹಾಕುತ್ತಿತ್ತು. ಆ ಹೇನುಗಳು ಕೂದಲಿನಿಂದ ಬೇರ್ಪಟ್ಟು ಬಾಚಣಿಕೆಯನ್ನು ನೆಲಕ್ಕೆ ಕುಟ್ಟುವಾಗ ದಿಕ್ಕೆಟ್ಟವರ ಹಾಗೆ ಹೆದರಿಕೆಯಿಂದ ಎಲ್ಲಿ ಹೋಗುವುದು ಗೊತ್ತಾಗದೆ ಚಡಪಡಿಸುತ್ತಿರುವಾಗ ನಮಗೆಲ್ಲ ವಿಕೃತ ಆನಂದ. ನಮ್ಮನ್ನು ಅವಮಾನಿಸಿದೆಯಲ್ಲಾ ಇದು ಈಗ ನಿನ್ನ ಸರತಿ ಅನುಭವಿಸು ಎಂದು ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುವಷ್ಟು ಖುಷಿ. ಆದರೆ ಈ ಸೀರುಗಳು ಮಾತ್ರ ಬಾಚಣಿಗೆಗೆ ಬಗ್ಗದೆ ತಮ್ಮ ಸಂತಾನವನ್ನು ಮುಂದುವರೆಸಿಕೊಂಡು ನಮ್ಮ ತಲೆಯಲ್ಲಿ ಕಾಯಂ ವಾಸ್ತವ್ಯ ಹೂಡಿರುತ್ತವೆ. ಹೇನಿನ ಹಾಗೆ ಇವು ಸುಲಭಕ್ಕೆ ಜಗ್ಗುವ, ಸುಲಭಕ್ಕೆಲ್ಲ ಕೂದಲಿನಿಂದ ಕಾಲ್ತೆಗೆಯುವ ಅಸಾಮಿಗಳಲ್ಲ. ಇವುಗಳನ್ನು ಎಳೆದು ತೆಗೆದು ಹೊರ ಹಾಕಲು ಅದಕ್ಕೇ ಬಾಚಣಿಕೆಯಂತಹ ಬೇರೆಯದೇ ಸಾಧನ ಬೇರೆ ಇದೆ. ಇವು ಮರದಿಂದ ಮಾಡಿದ ಉದ್ದದ ತೆಳು ದೇಹದ, ಸೂಜಿಯಂತಹ ಉದ್ದದ ಮೊನೆಗಳನ್ನು ತುದಿಯಲ್ಲಿ ಹೊಂದಿರುವ ಸೀರಣಿಗೆಗಳು. ಕೂದಲಿನ ಒಳಗೆ ಈ ಸೀರಣಿಗೆಯನ್ನು ತೂರಿಸಿ ಅಲ್ಲಿ ಬೀಡುಬಿಟ್ಟ ಈ ಸೀರುಗಳನ್ನು ಇದರ ಮೊನೆಗಳಲ್ಲಿ ಒತ್ತಿ ಹಿಡಿದು ಕೂದಲಿನ ತುದಿ ವರೆಗೆ ದರ ದರನೆ ಎಳೆ ತಂದು ಹಣಿಗೆಯ ಮೊನೆಗಳನ್ನು ಪಟಪಟನೆ ಒತ್ತಿ ಅವುಗಳನ್ನು ಕೊಲ್ಲಬೇಕು. ಅವು ಚಟ ಚಟ ಎಂದು ಸದ್ದು ಮಾಡುತ್ತಾ ಸಾಯುವಾಗ ಅದನ್ನು ಕೊಲ್ಲುವವರಿಗೆ ಅದೇನು ರಣೋತ್ಸಾಹವೋ. ಇದು ಎಲ್ಲರಿಗೂ ಸಾಧ್ಯವಿಲ್ಲ. ಕೆಲವು ಎಕ್ಸ್‌ಪರ್ಟ್‌ಗಳು ಅದಕ್ಕೆಂದೇ ಇರುತ್ತಾರೆ.

ಆದರೆ ಈ ಸೀರು ತೆಗೆಯುವಾಗ ಆಗುವ ನೋವು ಮಾತ್ರ ಯಾರಿಗೂ ಬೇಡ. ಆ ಸೀರುಗಳನ್ನು ಸೀರಣಿಗೆಯಲ್ಲಿ ಎಳೆದುಕೊಂಡು ಬರುವಾಗ ಚರ್ಮದ ಸಮೇತ ಕೂದಲು ಎಳೆದು ಕಿತ್ತಷ್ಟು ನೋವು. ಆ ಕೂದಲಿಗೆ ಅಂಟಿಕೊಂಡಿರುವ ಸೀರುಗಳು ಕೂದಲಿನ ತುದಿಗೆ ಬರುವ ಹೊತ್ತಿಗೆ ಕೂದಲಿನ ಬುಡವೆಲ್ಲ ಉರಿ ಎದ್ದು ಹೋಗಿರುತ್ತದೆ. ಹೀಗಾಗಿ ಸೀರು